ಕಳೆದ ಹತ್ತು ವರ್ಷಗಳಲ್ಲಿ ಒಟ್ಟು **335** ಸುಸ್ಥಿರ ತಂತ್ರಜ್ಞಾನಗಳನ್ನು ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ. ದಕ್ಷಿಣ ಭಾರತದಲ್ಲಿ ಖುಷ್ಕಿ ಬಾಸಾಯವು ಹೆಚ್ಚಿನ ಮಟ್ಟದಲ್ಲಿ ಕಾಣಸಿಗುವ ಕಾರಣ, ಖುಷ್ಕಿ ಬಾಸಾಯ ಸಂಬಂಧಿತ ತಂತ್ರಜ್ಞಾನಗಳ ಅಭಿವೃದ್ಧಿಗೆ ಆದ್ಯತೆ ನೀಡಿ, ವಿರಳವಾಗಿ ಮಳೆಯಾಗುವ ವರ್ಷಗಳಲ್ಲಿಯೂ ಸಹ ಉತ್ಪಾದಕತೆಯನ್ನು ಹೆಚ್ಚಿಸುವ ತಂತ್ರಜ್ಞಾನಗಳನ್ನು ಮತ್ತು ಸಮಗ್ರ ಕೃಷಿ ಪದ್ಧತಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಪರಿಸರ ಸ್ನೇಹಿ, ಕಡಿಮೆ ಖರ್ಚಿನ ತಂತ್ರಜ್ಞಾನಗಳು, ಇತ್ತೀಚಿನ ದಿನಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಹಾಗೂ ಮುಂಚಿನಿಂದ ಪೀಡಿಸುತ್ತಿರುವ ರೋಗ ಮತ್ತು ಕೀಟಗಳ ನಿಯಂತ್ರಣಾ ತಂತ್ರಜ್ಞಾನಗಳು ಹಾಗೂ ಸಮಗ್ರ ನಿರ್ವಹಣಾ ಪದ್ಧತಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಈ ತಂತ್ರಜ್ಞಾನಗಳನ್ನು ಅಳವಡಿಸುವುದರಿಂದಾಗಿ ಏಕದಳ, ದ್ವಿದಳ, ಎಣ್ಣೆಕಾಳು ಹಾಗು ಕಬ್ಬಿನ ಇಳುವರಿಯು ಹೆಚ್ಚಾಗಿದೆ.

**ಕಳೆದ 10 ವರ್ಷಗಳಲ್ಲಿ (2016–17 ರಿಂದ 2025–26) ಬಿಡುಗಡೆಯಾದ ತಂತ್ರಜ್ಞಾನಗಳ ವಿವರ**

| ತಂತ್ರಜ್ಞಾನಗಳು | 2016–17 | 2017–18 | 2018–19 | 2019–20 | 2020–21 | 2021–22 | 2022–23 | 2023–24 | 2024–25 | 2025–26 | ಒಟ್ಟು |
|---|---|---|---|---|---|---|---|---|---|---|---|
| 1. ಬೆಳೆ ಅಭಿವೃದ್ಧಿ | 2# | - | 2 | 1 | 5+1* | - | - | 1 | 1*+3# | - | 16 |
| 2. ಬೆಳೆ ಉತ್ಪಾದನೆ | 14 | 7 | 8 | 8 | 8 | 16+1* | 13 | 10 | 15+1* | 12 | 113 |
| 3. ಸಸ್ಯ ಕೀಟ ನಿಯಂತ್ರಣ | 3 | 2 | 4 | 3 | 3 | 7 | 10 | 3 | 5 | 1+1* | 42 |
| 4. ಸಸ್ಯ ರೋಗ ನಿಯಂತ್ರಣ | 5 | 6 | 3 | 4 | 7 | 11 | 5 | 1 | 3 | 3 | 48 |
| 5. ರೇಷ್ಮೆ ಕೃಷಿ | - | - | - | - | 3 | 1 | - | - | 1 | 1 | 6 |
| 6. ತೋಟಗಾರಿಕೆ | 3 | - | 1 | - | - | - | 2 | - | 2 | - | 8 |
| 7. ಕೃಷಿ ಇಂಜಿನಿಯರಿಂಗ್ | - | 1+2* | 1* | 1 | 1+3* | 2* | 2 | 2+1* | 7* | 8+3* | 34 |
| 8. ಆಹಾರ ಮತ್ತು ಪೋಷಣೆ | 2*+3# | 2* | 2* | 13* | 11* | 6* | 6* | 5* | 10* | 1* | 61 |
| 9. ಜೇನು ಕೃಷಿ | - | - | - | - | 1 | 2+1* | - | 2 | - | 1 | 7 |
| **ಒಟ್ಟು** | **32** | **20** | **21** | **30** | **43** | **47** | **38** | **25** | **48** | **31** | **335** |

* ವಾಣಿಜ್ಯೀಕರಿಸಿದ ತಂತ್ರಜ್ಞಾನಗಳು # ಪ್ರಸರಣೆಯಾದ ತಂತ್ರಜ್ಞಾನಗಳು